# ಕರ್ನಾಟಕ ಸರ್ಕಾರ

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ
## ಬೆಂಗಳೂರು

# 2013 - 2014ನೇ ಸಾಲಿನ
# ವಾರ್ಷಿಕ ವರದಿಯ ವಿವರಗಳು

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸಂಬಂಧಿಸಿದ 2013–2014 ರ ಸಾಲಿನ ವಾರ್ಷಿಕ ವರದಿ

### 1) ಮುಖ್ಯ ಧ್ಯೇಯಗಳು ಮತ್ತು ಜವಾಬ್ದಾರಿಗಳು:–

ಸರ್ಕಾರದ ಆದೇಶ ಸಂಖ್ಯೆ: ಲಾ 84 ಪಿಪಿಇ 75 ದಿನಾಂಕ: 01.12.1975 ರ ಅನ್ವಯ ಈ ರಾಜ್ಯದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ನಡೆಸಲು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಇದಲ್ಲದೆ, ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಮತ್ತು ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಈ ಇಲಾಖೆಯ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ 07 ಎಆರ್‌ಬಿ 2004 ದಿ: 23/9/2004ರ ಪ್ರಕಾರ ಈ ಇಲಾಖೆಯನ್ನು ಒಳಾಡಳಿತ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

### 2) ಮುಖ್ಯ ಕರ್ತವ್ಯಗಳು :–

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ :–

1. ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಸತ್ರ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯದ ಪರವಾಗಿ ಅಭಿಯೋಜನೆಯನ್ನು ನಡೆಸುವ ವ್ಯವಸ್ಥೆ ಮಾಡುವುದು.
2. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಗಳು ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು ನೀಡಿದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಅಂತಹ ತೀರ್ಪುಗಳು ಮತ್ತು ಆದೇಶಗಳ ವಿರುದ್ಧ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
3. ಅಭಿಯೋಗದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಂದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ನೀಡುವುದು.

4 ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಯುಕ್ತ ನ್ಯಾಯಾಲಯಗಳಿರುವ ತಾಲ್ಲೂಕಿನ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಸಿವಿಲ್ ವ್ಯಾಜ್ಯಗಳನ್ನು ನಡೆಸುವುದು.

5 ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿವಿಲ್ ವ್ಯಾಜ್ಯಗಳಲ್ಲಿ ನೀಡಿದ ತೀರ್ಪು ಮತ್ತು ಆದೇಶಗಳನ್ನು ಪರಿಶೀಲಿಸಿ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡುವುದು.

6 ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಲ್ಲಿಸುವ ದೋಷಾರೋಪಣ ಪಟ್ಟಿಗಳನ್ನು ಪರಿಶೀಲಿಸುವುದು

**3) <u>ಸಂಘಟನೆ:-</u>**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. 03 ಅಭಿಯೋಗ ಉಪ ನಿರ್ದೇಶಕರುಗಳು, 02 ಕಾನೂನು ಅಧಿಕಾರಿ [ಹಿರಿಯ], 06 ಕಾನೂನು ಅಧಿಕಾರಿಗಳು [ಕಿರಿಯ], ಒಬ್ಬರು ಕೇಂದ್ರ ಸಹಾಯಕರು, 02 ಆಡಳಿತಾಧಿಕಾರಿಗಳು, ಲೆಕ್ಕ ಪರಿಶೋಧನಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಅವರಿಗೆ ಸಹಾಯಕರಾಗಿರುತ್ತಾರೆ.

ಬೆಂಗಳೂರು ನಗರ, ಬೆಂಗಳೂರು ವಿಭಾಗ, ಮೈಸೂರು, ದಾವಣಗೆರೆ, ಮಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗಗಳಲ್ಲಿ ಒಟ್ಟು 7 ವಿಭಾಗೀಯ ಕಛೇರಿಗಳು ಇದ್ದು, ಕಾನೂನು ಅಧಿಕಾರಿ [ಹಿರಿಯ] ಇವರು ವಲಯ ಮಟ್ಟದಲ್ಲಿ, ಕಾನೂನು ಅಧಿಕಾರಿ [ಕಿರಿಯ], ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಅಭಿಯೋಜಕರುಗಳು ಸತ್ರ ನ್ಯಾಯಾಲಯಗಳಲ್ಲಿ, ರಾಜ್ಯದಲ್ಲಿ ಸ್ಥಾಪಿತವಾಗಿರುವ ತ್ವರಿತಗತಿ ನ್ಯಾಯಾಲಯಗಳಲ್ಲಿ ಈ ಇಲಾಖೆಯ ವತಿಯಿಂದ 27 ಸರ್ಕಾರಿ ಅಭಿಯೋಜಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ., ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಬೆಂಗಳೂರು ನಗರದಲ್ಲಿ ಸಿ.ಎಂ.ಎಂ ಮತ್ತು ಜಿಲ್ಲಾ ಮಟ್ಟದಲ್ಲಿ ಸಿ.ಜೆ.ಎಂ ನ್ಯಾಯಾಲಯಗಳಲ್ಲಿ ಹಾಗೂ ಕಡೂರು ಸಿಜೆಎಂ ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಕ್ರಿಮಿನಲ್ ಪ್ರಕರಣಗಳನ್ನು ಪ್ರತಿನಿಧಿಸುತ್ತಿರುತ್ತಾರೆ,

ಜಿಲ್ಲಾ ಮಟ್ಟದಲ್ಲಿ ಆರಕ್ಷಕ ಅಧೀಕ್ಷಕರ ಕಛೇರಿಗಳಲ್ಲಿ ತಲಾ ಒಂದು ಕಾನೂನು ಅಧಿಕಾರಿ [ಕಿರಿಯ] ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಪೊಲೀಸ್ ಆಯುಕ್ತರ ಕಛೇರಿ ಬೆಂಗಳೂರು ನಗರ, ಮೈಸೂರು ಮತ್ತು ಹುಬ್ಬಳ್ಳಿ ಇಲ್ಲಿ ಕಾನೂನು ಅಧಿಕಾರಿಗಳು [ಕಿರಿಯ] ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ತಾಲ್ಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಿರುತ್ತಾರೆ.

ಸರ್ಕಾರಿ ಅಭಿಯೋಜಕರು : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು : ಸಹಾಯಕ ಸರ್ಕಾರಿ ಅಭಿಯೋಜಕರುಗಳಿಗೆ ಪೂರಕ ಸಿಬ್ಬಂದಿ ವ್ಯವಸ್ಥೆ ಮಾಡಲಾಗಿರುತ್ತದೆ.

**4) ವೃಂದಬಲ:-**

ದಿನಾಂಕ:31-03-2014 ರಲ್ಲಿ ಇದ್ದಂತೆ ಈ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳು, ಭರ್ತಿಯಾದ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿಯಾದ ಹುದ್ದೆಗಳಲ್ಲಿ ಎಸ್.ಸಿ ಮತ್ತು ಎಸ್.ಟಿ. ಹುದ್ದೆಗಳ ವಿವರಗಳ ಮಾಹಿತಿ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಒಟ್ಟು | ಎಸ್.ಸಿ | ಎಸ್.ಟಿ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 1 | ನಿರ್ದೇಶಕರು | 01 | – | 01 | **01** | – | – |
| 2 | ಅಭಿಯೋಗ ಉಪ ನಿರ್ದೇಶಕರು | 03 | – | 03 | **03** | – | – |
| 3 | ಸ.ಅ/ಕಾ.ಅ.[ಹಿ] | 146 | 99 | 47 | **146** | 26 | 08 |
| 4 | ಹಿ.ಸ.ಸ.ಅ/ಕಾ.ಅ.[ಕಿ] | 120 | 103 | 17 | **120** | 18 | 04 |
| 5 | ಕೇಂದ್ರ ಸಹಾಯಕರು | 01 | 01 | – | **01** | – | – |
| 6 | ಸ.ಸ.ಅ-ವ-ಸ.ಸ.ವ | 367 | 187 | 180 | **367** | 26 | 04 |
| 7 | ಲೆಕ್ಕ ಪರಿಶೋಧನಾಧಿಕಾರಿ | 01 | – | 01 | **01** | – | – |
| 8 | ಲೆಕ್ಕಪತ್ರ ಅಧೀಕ್ಷಕರು | 01 | – | 01 | **01** | – | – |
| 9 | ಆಡಳಿತಾಧಿಕಾರಿಗಳು | 10 | 09 | 01 | **10** | 02 | – |
| 10 | ಅಧೀಕ್ಷಕರು | 36 | 21 | 15 | **36** | 02 | 02 |
| 11 | ಪ್ರ.ದ.ಸ | 64 | 57 | 07 | **64** | 09 | 01 |
| 12 | ಸ.ಗ್ರಂಥಪಾಲಕರು | 01 | – | 01 | **01** | – | – |
| 13 | ಶೀಘ್ರಲಿಪಿಗಾರರು | 204 | 96 | 108 | **204** | 13 | 01 |
| 14 | ಹಿ.ಬೆರಳಚ್ಚುಗಾರರು | 37 | 27 | 10 | **37** | 02 | – |
| 15 | ದ್ವಿ.ದ.ಸ. | 65 | 48 | 17 | **65** | 09 | 04 |
| 16 | ಬೆರಳಚ್ಚುಗಾರರು | 310 | 141 | 169 | **310** | 27 | 10 |
| 17 | ವಾಹನ ಚಾಲಕರು | 04 | 02 | 02 | **04** | 01 | – |
| 18 | ತೃತೀಯ ದರ್ಜೆ ಸಹಾಯಕರು | 01 | 01 | – | **01** | – | 01 |
| 19 | ಅಟೆಂಡರ್‌ಗಳು | 51 | 31 | 20 | **51** | – | 01 |
| 20 | ದಲಾಯತರು | 292 | 171 | 121 | **292** | 25 | 09 |
| | **ಒಟ್ಟು ಹುದ್ದೆಗಳು** | **1715** | **994** | **721** | **1715** | **160** | **45** |

## 5) ಕ್ರಿಮಿನಲ್ ಪ್ರಕರಣಗಳ ತೀರ್ಪು ಮತ್ತು ಆದೇಶಗಳ ಪರಿಶೀಲನೆ ಬಗ್ಗೆ ವಿವರಗಳು:-

ದಿನಾಂಕ:01-04-2013 ರಿಂದ ದಿನಾಂಕ:31-03-2014ರ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಹಾಗೂ ಈ ಕಛೇರಿಯಲ್ಲಿ ನ್ಯಾಯಾಲಯದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣೆಗೆ ಅರ್ಜಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಲಾದ ಕ್ರಿಮಿನಲ್ ಪ್ರಕರಣಗಳ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | **138394** |
| 2. | ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆ ವಿಧಿಸಲಾದ ಪ್ರಕರಣಗಳ ಒಟ್ಟು ಸಂಖ್ಯೆ | **24193** |
| 3. | ಇತರೆ ರೀತಿಯಲ್ಲಿ ಅಂದರೆ ಬಿಡುಗಡೆ, ಡಿಸ್‌ಚಾರ್ಜ್‌ನಲ್ಲಿ ಅಂತಿಮಗೊಂಡ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | **114201** |
| 4. | ದಿನಾಂಕ:01-04-2013 ರಿಂದ 31-03-2014ರ ಅವಧಿಯಲ್ಲಿ ಈ ಕಛೇರಿಯಲ್ಲಿ ಪರಿಶೀಲಿಸಲಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | **21649** |
| 5. | ನ್ಯಾಯಾಲಯಗಳ ತೀರ್ಪು ಮತ್ತು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | **239** |
| 6. | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಈ ಕಛೇರಿಯಿಂದ ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ: | **19** |
| 7. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | **21391** |

6) **ಸರ್ಕಾರಿ ವ್ಯಾಜ್ಯಗಳು (ಸಿವಿಲ್):-**

ದಿನಾಂಕ:01-04-2013ರಿಂದ 31-03-2014ರ ಅವಧಿಯಲ್ಲಿ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ನ್ಯಾಯಾಲಯಗಳು ಮತ್ತು ಸಂಯುಕ್ತ ನ್ಯಾಯಾಲಯಗಳು ಹೊರಡಿಸಿರುವ ಸಿವಿಲ್ ಮೊಕದ್ದಮೆಗಳ ತೀರ್ಪುಗಳು ಮತ್ತು ಆದೇಶಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಿದ್ದು, ಪರಿಶೀಲಿಸಿದ ಬಗ್ಗೆ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ದಿನಾಂಕ:01-04-2013 ರಿಂದ 31-03-2014ರ ಅವಧಿಯಲ್ಲಿ ಪರಿಶೀಲಿಸಿಲಾದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 2779 |
| 2. | ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿರುವ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 483 |
| 3. | ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 06 |
| 4. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 1405 |
| 5. | ವರದಿಯ ವರ್ಷದಲ್ಲಿ ವಜಾಗೊಂಡ ದಾವೆಗಳ ಒಟ್ಟು ಸಂಖ್ಯೆ | 885 |
| 6. | ಸಿವಿಲ್ ದಾವೆಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲಾದ ಒಟ್ಟು ಲಿಖಿತ ಹೇಳಿಕೆಗಳು | 1604 |
| 7. | ಸಿವಿಲ್ ದಾವೆಗಳಿಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಮತ್ತು ಸರ್ಕಾರದ ಅಧಿಕಾರಿಗಳೊಂದಿಗೆ ಮಾಡಿದ ಒಟ್ಟು ಪತ್ರ ವ್ಯವಹಾರ | 6863 |

7) ಆಡಳಿತ:-

## 2013-14ನೇ ಸಾಲಿನ ವರ್ಗಾವಣೆ ವಿವರಗಳು

| ಕ್ರ.ಸಂ. | ಸಮೂಹ | ಪದನಾಮ | ವರ್ಗಾವಣೆಯಾದ ಅಧಿಕಾರಿ/ ನೌಕರರ ಸಂಖ್ಯೆ | ಷರಾ |
|---|---|---|---|---|
| 1. | 'ಎ' | ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ[ಹಿರಿಯ] | 20 | 02 ಅಧಿಕಾರಿಗಳ ವರ್ಗಾವಣೆಯನ್ನು ರದ್ದುಪಡಿಸಲಾಗಿದೆ |
| | | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ [ಕಿರಿಯ] | 04 | 02 ಅಧಿಕಾರಿಗಳ ವರ್ಗಾವಣೆಯನ್ನು ರದ್ದುಪಡಿಸಲಾಗಿದೆ |
| 2. | 'ಬಿ' | ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರು | 34 | 02 ಅಧಿಕಾರಿಗಳ ವರ್ಗಾವಣೆಯನ್ನು ರದ್ದುಪಡಿಸಲಾಗಿದೆ |
| | | ಆಡಳಿತಾಧಿಕಾರಿ | 02 | - |
| 3. | 'ಸಿ' | ಅಧೀಕ್ಷಕರು | 02 | - |
| | | ಪ್ರಥಮ ದರ್ಜೆ ಸಹಾಯಕರು | 04 | - |
| | | ಶೀಘ್ರಲಿಪಿಗಾರರು | 06 | - |
| | | ದ್ವಿತೀಯ ದರ್ಜೆ ಸಹಾಯಕರು | 07 | - |
| | | ಹಿರಿಯ ಬೆರಳಚ್ಚುಗಾರರು | 02 | - |
| | | ಬೆರಳಚ್ಚುಗಾರರು | 10 | - |
| 4. | 'ಡಿ' | ಅಟೆಂಡರ್ | 01 | - |
| | | ದಲಾಯತ್ | 02 | - |

## ವರದಿಯ ವರ್ಷದಲ್ಲಿ ಮುಂಬಡ್ತಿಯ ವಿವರಗಳು

| ಕ್ರ.ಸಂ. | ಸಮೂಹ | ಹುದ್ದೆಯ ಹೆಸರು | ಬಡ್ತಿ ಹೊಂದಿದ ಹುದ್ದೆಯ ಹೆಸರು | ಬಡ್ತಿ ಹೊಂದಿದ ಅಧಿಕಾರಿ/ನೌಕರರ ಸಂಖ್ಯೆ |
|---|---|---|---|---|
| 1. | 'ಎ' | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ [ಕಿರಿಯ] | ಸರ್ಕಾರಿ ಅಭಿಯೋಜಕರು/ ಕಾನೂನು ಅಧಿಕಾರಿ[ಹಿರಿಯ] | 02 |
| 2. | 'ಬಿ' | ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರು | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ [ಕಿರಿಯ] | 46 |
| 3. | 'ಸಿ' | ಅಧೀಕ್ಷಕರು | ಆಡಳಿತಾಧಿಕಾರಿ | **04** |
| | | ದ್ವಿತೀಯ ದರ್ಜೆ ಸಹಾಯಕರು | ಪ್ರಥಮ ದರ್ಜೆ ಸಹಾಯಕರು | **02** |
| | | ಬೆರಳಚ್ಚುಗಾರರು | ಶೀಘ್ರಲಿಪಿಗಾರರು | **12** |

## ವರದಿಯ ವರ್ಷದಲ್ಲಿ ಸೃಜನೆಯಾದ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಸೃಜನೆಯಾದ ಹುದ್ದೆಗಳು | ಹುದ್ದೆಗಳ ಸಂಖ್ಯೆ | ಷರಾ |
|---|---|---|---|
| 1. | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಹಿರಿಯ ಸಿಜೆ & ಸಿಜೆಎಂ ನ್ಯಾಯಾಲಯ, ಮೈಸೂರು. | 01 | ಸರ್ಕಾರದ ಆದೇಶ ಸಂಖ್ಯೆ: ಒಇ 107 ಪಿಪಿಇ 2013, ದಿನಾಂಕ: 16.12.2013 |
| | ಶೀಘ್ರಲಿಪಿಗಾರರು, ಹಿಸಸಅ ಕಛೇರಿ, ಮೈಸೂರು, | 01 | ಸರ್ಕಾರದ ಆದೇಶ ಸಂಖ್ಯೆ: ಒಇ 107 ಪಿಪಿಇ 2013, ದಿನಾಂಕ: 16.12.2013 |

## ವರದಿಯ ವರ್ಷದಲ್ಲಿ ನೇಮಕಾತಿಯ ವಿವರಗಳು

| ಕ್ರಮ ಸಂಖ್ಯೆ | ಭರ್ತಿ ಮಾಡಲಾದ ಹುದ್ದೆಯ ವಿವರ | ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | ಷರಾ |
|---|---|---|---|
| 1. | ಪ್ರಥಮ ದರ್ಜೆ ಸಹಾಯಕರು | 02 | ಅನುಕಂಪದ ಮೇಲೆ ನೇಮಕಾತಿ |
| 2. | ದ್ವಿತೀಯ ದರ್ಜೆ ಸಹಾಯಕರು | 01 | ಅನುಕಂಪದ ಮೇಲೆ ನೇಮಕಾತಿ |
| 3. | ದಲಾಯತ್ | 01 | ಅನುಕಂಪದ ಮೇಲೆ ನೇಮಕಾತಿ |

ಸರ್ಕಾರದ ಪತ್ರ ಸಂಖ್ಯೆ: ಒಇ 235 ಪಿಪಿಇ 2007 ದಿನಾಂಕ:23.10.2007 ರ ಮತ್ತು ಒಇ 421 ಪಿಪಿಇ 2006 ದಿನಾಂಕ:28.08.2008ರ ಪ್ರಕಾರ ಬಾಹ್ಯ ಮೂಲದಿಂದ ಭರ್ತಿ ಮಾಡಲು ಅನುಮತಿಸಿರುವ ಹುದ್ದೆಗಳ ವಿವರ:

| ಕ್ರಸಂ | ಹುದ್ದೆಗಳ ವಿವರ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 01 | ಶೀಘ್ರಲಿಪಿಗಾರರು | 42 | 39 | 03 |
| 02 | ಬೆರಳಚ್ಚುಗಾರರು | 124 | 121 | 03 |
| 03 | ದಲಾಯತ್ | 155 | 155 | – |
| **ಒಟ್ಟು** | | **321** | **315** | **06** |

ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎನ್/ಸಸಅ/ಆರ್‌ಸಿ/01/2011-12, ದಿನಾಂಕ:22.02.2014ರ ಪ್ರಕಾರ ಈ ಇಲಾಖೆಯಲ್ಲಿ ಖಾಲಿ ಇದ್ದ 197 ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ನೇಮಕಾತಿಯನ್ನು ಹೊರಡಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಸ್ಥಳ : ಬೆಂಗಳೂರು
ದಿನಾಂಕ : 06 .06.2014

6/06/2014
(ಚಂದ್ರಶೇಖರ ಜಿ. ಹಿರೇಮಠ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರು (ಪ್ರ), ಬೆಂಗಳೂರು
6/06/2014